ನೋಟ್ * ಸೆಟ್ಲ್‌ದ ತಾಲ್ಲೂಕುಗಳಲ್ಲಿ ಇದನ್ನೆ ದಾಖಲ್ಮಾಡಲವಶ್ಯಕವಿಲ್ಲ.

† 50 ಎಕರೆಗಳಿಗಿಂತ ಜಾಸ್ತಿಯಾಗಿರುವ ಜಮೀನಿನ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

‡ ಹತ್ತು ರೂಪಾಯಿಗಳಿಗಿಂತ ಜಾಸ್ತಿ ಬೆಲೆಯಾಗುವಷ್ಟು ಮರಗಳಿರುವ ಸರ್ಕಾರದ ಬಂಜರು ಜಮೀನು ಕೊಡಲ್ಪಡುವ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ನಂ. 125.—ಮೆ॥ ಪಂಚನಾಥರಾಯರು ಬೆಂಗಳೂರು ಡಿಸ್ಟ್ರಿಕ್ಟು ಪೋಲೀಸ್ ಸೂಪರ್‌ಟೆಂಡೆಂಟರ ಆಫೀಸಿನ ಚಾರ್ಜನ್ನ 1887ನೇ ಇಸವಿ ಸೆಪ್ಟಂಬರ್ 14ನೇ ತಾರೀಖಿನ ಮಧ್ಯಾನ್ನ ಬಿಟ್ಟುಸಿ ಮೆ॥ ಕುಪ್ಪುಸ್ವಾಮಿ ಮೊದಲಿಯಾರ್ರು ಪುನಶ್ಚ ವಹಿಸಿರುತ್ತಾರೆ.

ತಾರೀಖು 4ನೇ ಅಕ್ಟೋಬರ್ 1887.

ನಂ. 126.—ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರ್ಜಿಯನ್ ಮೆ॥ ಪಿ. ಕೆ. ಸ್ವಾಮಿನಾಥಯ್ಯರ್ ಯವರಿಗೆ, 1887ನೇ ಇಸವಿ ಸೆಪ್ಟಂಬರ್ 9ನೇ ಮರ್ತುಮಿನ C 1187ನೇ ನಂ. ವುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ 15 ದಿವಸಗಳ ಪ್ರಿವಿಲೀಜ್ ರಜಾವನ್ನ ಸೆಪ್ಟಂಬರ್ 6ರ ಲಾಗಾಯತು ಉಪಯೋಗಿಸಿಕೊಂಡು ಅದೇ ತಿಂಗಳ 20ರಲ್ಲಿ ಪುನಃ ಕೆಲಸದ ಮೇಲೆ ಹಾಜರಾಗಿರುತ್ತಾರುಗಿ ಅವರು ಉಪಯೋಗಿಸಿಕೊಳ್ಳದ ಬಂದು ದಿವಸದ ರಜಾವನ್ನ ಇದರಿಂದ ರದ್ದುಪಡಿಸಲ್ಪಟ್ಟಿರುತ್ತೆ.

ತಾರೀಖು 5ನೇ ಅಕ್ಟೋಬರ್ 1887.

ನಂ. 127.—ಮೆ॥ ಅಬ್ದುಲ್ ರಹಿಮ್ಮಾರವರು ಮೈಸೂರು ಡಿಸ್ಟ್ರಿಕ್ಟು ವ ಟ್ರೆಜರೀ ಚಾರ್ಜನ್ನು ಮಾಹೇ ಗುಜಸ್ತಾ 25ನೇ ತಾರೀಖಿನ ಪ್ರಾತಃಕಾಲ ಬಿಟ್ಟುಸಿ ಮೆ॥ ಟಿ. ಆನಂದರಾಯರವರು ವಹಿಸಿರುತ್ತಾರೆ.

ನಂ. 128.—ಈ ಕೆಳಗೆ ಬರುವ ಸೆಕ್ಷನ್‌ಗಳು ಸರ್ವೆ ಮ್ಯಾನ್ಯುಯಲಿನ XVII ವ XVIII ಸೆಕ್ಷನಗಳಿಗೆ ಬದಲಾಗಿ ಕೇರಿಸಲ್ಪಡತಕ್ಕದ್ದು.

XVII. ಯಿರಿಗೇರ್ಷ ಸೆಸ್ಸ್‌ಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲಿ ಇನಾಂ ತರೀಕ ಯಿರತಕ್ಕ ತಮಾಂ ತರೀ ಜಮ್ಮಿಗಳ ಐಯಿಂದ ಠರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಕೇರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{17}$ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇರ್ಷ ಸೆಸ್ಸಿಗೆ ಸಮನಾದ ಪೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮ್ಮಿ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟು ಯಿರಿಗೇರ್ಷ ಫಂಡ್" ಹೆಡ್ಡಿಗೆ ಲೆಕ್ಕದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕ ಅಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ವದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಪೊಬಲಗಾಗಲಿ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇರ್ಷ ಸೆಸ್ಸುಯಾನೆ ನೀರು ಸರದಿಯನ್ನು ಠರಾವ್ ಮಾಡುವದಕ್ಕೋಸ್ಕರ ಸರ್ವೆ ಇಲಾಖೆಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು. ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೆ ಆಕಾರದಲ್ಲಿ ಅವುಗಳ ಮೇಲೆ ಠರಾವ್ ಮಾಡಲ್ಪಡಬಹುದಾದ ಯಾವದಾದರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮ್ಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಪೊಬಲಗಿ ವೆನ್ನುಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

ನಂ. 129.—1875ನೇ ಇಸವಿ ಮೇ 7ನೇ ಮತ್ತು ಂ 62ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇರ್ಷ ಸೆಸ್ಸ್ ಫಂಡಿನ ಅಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಟಿಗಳವರು ಅನುಸರಿಸ ತಕ್ಕ ಬಗ್ಗೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರೆಗೆ ತಿದ್ದುಪಾಟುಗಿರುತ್ತದೆ:—

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂಥಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂಥಾ ವ ಅವುಗಳನ್ನ ಒಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂಥಾ ಜವಾಬ್ದಾರಿಯು ಖಂಡಿತವಾಗಿ ಜಾರೀಯಲ್ಲಿ ತರಲ್ಪಡತಕ್ಕದ್ದು. ಬಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ಒಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಅವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ಪ್ರಯತ್ನದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂಥಾ ಕಾಮಗಾರೀ ಪಗೈರೇ ಕೆಲಸವನ್ನ ಗವರ್ನಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಆಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

ತಾರೀಖು 6ನೇ ಅಕ್ಟೋಬರ್ 1887

ನಂ. 130.—ಈಚಿಗೆ ನಡೆದ ಸರ್ಕಾರೀ ಪರೀಕ್ಷೆಗೆ ಹಾಜರಾಗಿದ್ದ ಇದರಡೀ ನಮೂದಾಗುವ ಆಫೀಸರರುಗಳಿಗೆ ಅವರವರ ಹೆಸರಿನ ಬಾಜೂದಲ್ಲಿ ಕಂಡ ಮೇರಿಗೆ ಯಿಮ್ತಿಹಾನ್ ರಜಾ ಕೊಡಲ್ಪಟ್ಟಿರುತ್ತದೆ.

	ಯಿಂದ.	ವರಿಗೆ.
ಹಾಸನ ಅ॥ ಕಮ್ಮಿಷನರ್ ಮೆ॥ ಪೊನ್ನರಂಗಂ ಮೊದಲಿಯಾರ್ರು	1887ನೇ ಜೂ॥ 9ರ ಲಾ॥	1887ನೇ ಜೂ॥ 18ರ ವರಿಗೆ.
ಆನೆಕಲ್ ಅಮಲ್ದಾರ್ ಸೈಯ್ಯದ್ ಅಮೀರಹಸ್ನ್	ಡಿಟೋ 12	ಡಿಟೋ 17
ಚನ್ನಪಟ್ಣ ಡೆಪ್ಯೂಟಿ ಅಮಲ್ದಾರ್ ರಾಘವೇಂದ್ರರಾವ್	ಡಿಟೋ 12	ಡಿಟೋ 18
ಗ್ರಾಮವ ಡೆಪ್ಯೂಟಿ ಅಮಲ್ದಾರ್ ನರಶಿಮ್ಹಮೂರ್ತಿ	ಡಿಟೋ 8	ಡಿಟೋ 20
ಹಿರಿಯೂರ್ ಅಮಲ್ದಾರ್ ಮಿರ್ಕವಮಾಲುದ್ದೀನ್ ಅಲ್ಲೀಖಾನ್	ಡಿಟೋ 14	ಡಿಟೋ 16
ಹೊಳಲಕೆರೇ ಅಮಲ್ದಾರ್ ಅಹಮ್ಮದ್ ಅಲ್ಲಿ	ಡಿಟೋ 13	ಡಿಟೋ 15
ದಾವಣಗೆರೇ ಅಮಲ್ದಾರ್ ಹೊನ್ನಪ್ಪನಾಯಡು	ಡಿಟೋ 12	ಡಿಟೋ 18
ಜಗಲೂರು ಅಮಲ್ದಾರ್ ಕೇತೂರಾವ್	ಡಿಟೋ 13	ಡಿಟೋ 15
ತಿರುಮಕೂಡ್ಲು ಅಮಲ್ದಾರ್ ಕೃಷ್ಣಯ್ಯಂಗಾರ್	ಡಿಟೋ 12	ಡಿಟೋ 15
ಕೋಲಾರ ಅಮಲ್ದಾರ್ ಮಿರ್ನಿಜಾಮುದ್ದೀನ್ ಅಲ್ಲೀಖಾನ್	ಡಿಟೋ 14	ಡಿಟೋ 17
ಬಾಗೇಪಲ್ಲೀ ಅಮಲ್ದಾರ್ ಶೇತಾರಾಮಯ್ಯ	ಡಿಟೋ 11	ಡಿಟೋ 22
ಚಿಕ್ಕನಾಯಕನಹಳ್ಳೀ ಅಮಲ್ದಾರ್ ಶ್ರೀಕಂಠಯ್ಯ	ಡಿಟೋ 10	ಡಿಟೋ 18
ಏರಾ ಅಮಲ್ದಾರ್ ವೆಂಕಟಾಚಲಯ್ಯ	ಡಿಟೋ 11	ಡಿಟೋ 16
ಕುಣಿಗಲ್ ಅಮಲ್ದಾರ್ ಕೃಷ್ಣರಾವ್	ಡಿಟೋ 11	ಡಿಟೋ 20
ಪಾವಗಡ ಅಮಲ್ದಾರ್ ಶಾಮಯ್ಯಂಗಾರ್	ಡಿಟೋ 8	ಡಿಟೋ 21

ನಂ. 132.—ಈ ಕೆಳಗೆ ನಮೂದಾಗುವ ವುಮೇದಿವಾರರು, 1887ನೇ ಇಸವಿ ಸೆಪ್ಟಂಬರ್ 15ನೇ ತಾರೀಖು ಲಾಗಾಯತು 3ನೇ ಕ್ಲಾಸ್ ಅಸಿಸ್ಟೆಂಟರಾಗಿ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ಪಿ. ರಾಜರತ್ನಂ ಪಿಳ್ಳೆ. ವೀ. ಅರಿವಾನಂದಂ.

ತಾರೀಖು 7ನೇ ಅಕ್ಟೋಬರ್ 1887.

ನಂ. 133.—ಮೆ॥ ಬಿ. ಕೃಷ್ಣಯ್ಯಂಗಾರ್ಯವರು, ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟ್ ವ ಆಫೀಸಿನ ಚಾರ್ಜನ್ನ 1887ನೇ ಇಸವಿ ಸೆಪ್ಟಂಬರ್ ತಾರೀಖು 30ನೇ ಮಧ್ಯಾನ್ಹಾತ್ಪರ ಒಪ್ಪಿಸಿ ಮೆ॥ ಕೆ. ರಾಮಚಂದ್ರರಾಯರವರು ವಹಿಸಿರುತ್ತಾರೆ.

ಮ್ಯುನಿಸಿಪಲ್.

ನಂ. 131.—ಮೈಸೂರ ಪಟ್ಟಣದಲ್ಲಿ, ಕೆಲವು ಬೀದಿಗಳನ್ನು ವಿಸ್ತರಿಸತಕ್ಕ ಬಗ್ಗೆ ಈ ಕೆಳಗೆ ವಿವರಿಸೋಣಾದ ಜಮೀನುಗಳು, ಸರ್ಕಾರಕ್ಕೆ ಜೇಕಾಗಿರುತ್ತೆಂಬದಾಗಿ 1870ನೇ ಇಸವಿ 10ನೇ ಲ್ಯಾಂಡ್ ಅಕ್ವಿಜೇಷ್ಷ ಆಕ್ಟಿನ ಸೆಕ್ಷ್ಷ ಅನುಸರಿಸಿ ಯಿದರಿಂದ ಪ್ರಕಟಿಸಲ್ಪಟ್ಟು ಯಿದೆ.

ನಂಬರ್.	ಜಮೀನು ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಸ್ಕ್ವೇರ್ ಫೀಟ್	ವಿಸ್ತೀರ್ಣ. ಲೀನಿಯರ್ ಫೀಟ್	ತಪಕೀಲು.	ಯಾವ ಬೀದಿಗೆ ಸೇರಿದ್ದು.	ಚೌತಪ್ಪರ್ದ್ದು.
1	ಕಿಲ್ತೆಯಲ್ಲಿ ಮೋತೀಖಾನೆ ಬೀದಿ	ನಂಜನಗೂಡು ನಂಜುಂಡಪ್ಪ.	24	60	ತಖ್ತಪೋಷ್ಷಿಮನೆಯ 40 ಅಂಕಣಗಳು 11 ಅಂಕಣದ ತಾರೇ ಡಿವಬಗ್ಯೆ 1 ಭಾವಿ	ಚರಾಂಡೀ ನಲ್ಲಿ ಹಾಕು	ಪೂರ್ವಕ್ಕೆ ಶಾಮಂಣನ ಮನೆ, ದಕ್ಷಿಣಕ್ಕೆ ಮೋತೀಖಾನೆಬೀದಿ, ಪಶ್ಚಿಮಕ್ಕೆ ಯಿಬ್ಬನಕಟ್ಟೆ ಮನೆ, ಉತ್ತರಕ್ಕೆ ರಾಮಂಣನ ಮನೆ
2	ಡಿಟೋ	ರಾಮಂಣ	18	24	3 ಹಂಚಿನ ಅಂಕಣಗಳು	ಡಿಟೋ	ಪೂರ್ವಕ್ಕೆ ತಿರುಮಲರಂಗಾಚಾರೀ ಮನೆ, ದಕ್ಷಿಣಕ್ಕೆ ನಂಜುಂಡಪ್ಪನ ಮನೆ, ಪಶ್ಚಿಮಕ್ಕೆ ರಾಮಂಣನ ಮನೆ, ಉತ್ತರಕ್ಕೆ ಅನಂತಯ್ಯನ ಮನೆ
3	ಡಿಟೋ	ಅನಂತಯ್ಯ	11	16	ಜಮೀನು	ಡಿಟೋ	ಪೂರ್ವಕ್ಕೆ ಗಲ್ಲಿ, ದಕ್ಷಿಣಕ್ಕೆ ರಾಮಂಣನ ಮನೆ, ಪಶ್ಚಿಮಕ್ಕೆ ಅನಂತಯ್ಯನ ಮನೆ, ಉತ್ತರಕ್ಕೆ ರಾವಾಚಾರಿ ಮನೆ.
4	ಡಿಟೋ	ಪಿನಗೊಂಡೆ ರಾವಾಚಾರ್	11	36	ಹಂಚಿನ 3 ಅಂಕಣ ತಾರೇವರಾಂಡಾವಿನ 3 ಅಂಕಣ, ತಖ್ತಪೋಷಿನ 2 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಗೋಪಾಲಾಚಾರಿ ಮನೆ, ದಕ್ಷಿಣಕ್ಕೆ ಅನಂತಯ್ಯನ ಮನೆ, ಪಶ್ಚಿಮಕ್ಕೆ ರಾವಾಚಾರ್ರ ಮನೆ, ಉತ್ತರಕ್ಕೆ ವೆಂಟಸುಬಯ್ಯನ ಮನೆ
5	ವೆಂಕಟಸುಬಯ್ಯನವರ ಸಂದಿ	ದಾಸಂಭಟ್ಟ	33	46	ತಖ್ತಪೋಷ್ 11 ಅಂಕಣ, ಹಂಚಿನ 15 ಅಂಕಣ ಡಿಟೋ ವರಾಂಡ 5 ಅಂಕಣ ತಾರೇ 1 ಅಂಕಣ ಭಾವಿ 1	ಡಿಟೋ	ಪೂರ್ವಕ್ಕೆ ರಾವಾಶಾಸ್ತ್ರೀ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನವರ ಸಂದಿ, ಪಶ್ಚಿಮಕ್ಕೆ ಡಿ. ಕೃಷ್ಣಪ್ಪನ ಮನೆ, ಉತ್ತರಕ್ಕೆ ಮುನಿಯಾಜಪ್ಪೀ ಬೀದಿ
6	ಕಿಲ್ತೆಯಲ್ಲಿ ಮುನಿಯಾಜಪ್ಪೀ ಬೀದಿ	ನಾಗೇಶರಾವ್	10	60	ಹಂಚಿನ ವಪ್ಪರದ 1 ಕೆಂಕಣ, 1 ಭಾವಿ	ಡಿಟೋ	ಪೂರ್ವಕ್ಕೆ ಮುರಾರಿರಾಯರ ಮನೆ, ದಕ್ಷಿಣಕ್ಕೆ ಸುಬ್ಬರಾಯರ ಜಮೀನು, ಪಶ್ಚಿಮಕ್ಕೆ ನಾಗೇಶರಾಯರ ಮನೆ, ಉತ್ತರಕ್ಕೆ ಮುನಿಯಾಜಪ್ಪೀಬೀದಿ
7	ಮೋತೀಖಾನಾ ಬೀದಿ	ಸುಬ್ಬರಾವ್	18	30	ಜಮೀನು	ಡಿಟೋ	ಪೂರ್ವಕ್ಕೆ ಸುಬ್ಬರಾಯರ ಮನೆ, ದಕ್ಷಿಣಕ್ಕೆ ಗರಳಪುರಿ ಶಾಸ್ತ್ರಿಗಳ ವಾನೆಯಹಿತ್ತಲು, ಪಶ್ಚಿಮಕ್ಕೆ ವೆಂಕಟಕೃಷ್ಣ ಅರಸಿನವರ ಮನೆ, ಉತ್ತರಕ್ಕೆ ನಾಗೇಶರಾಯರ ಮನೆ
8	ಡಿಟೋ	ಗರಳಪುರಿಶಾಸ್ತ್ರಿ	18	33	ಹಂಚಿನ ವಪ್ಪರ 1 ಅಂಕಣ	ಡಿಟೋ	ಪೂರ್ವಕ್ಕೆ ಗರಳಪುರಿಶಾಸ್ತ್ರಿಗಳ ಮನೆ, ದಕ್ಷಿಣಕ್ಕೆ ಮೂರೆಪ್ಪನ ಮಗ ನರಸಿಂಹಮೂರ್ತಿ ಮನೆ, ಪಶ್ಚಿಮಕ್ಕೆ ವೆಂಕಟಕೃಷ್ಣೀಅರಸಿನವರ ಮನೆ, ಉತ್ತರಕ್ಕೆ ಸುಬ್ಬರಾಯರ ಮನೆ

ನಂಬರ್.	ಜಮ್ಮಾ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಪೈರ್ಮೈ ಖಿಲ್ಲಿ.	ವಿಸ್ತೀರ್ಣ. ಪೈರ್ಮೈ ಖಿಲ್ಲಿ.	ತಪಾಲು.	ಜಮ್ಮಾ ಬಗ್ಗೆ ಟೀಕಾ ಟಿಪ್ಪಣಿ.	ಚೌತಪ್ಪು.
9	ಮೋತೀಖಾನಾ ಬೀದಿ	ಮೂರ್ತೆಪ್ಪನ ಮಗ ನೃಸಿಂಹ ಮೂರ್ತಿ	48 48	30 31	ತಾರೀ ಮನೆಯ 3 ಅಂಕಣ ತಖ್ತಪೋಷ್ 21 ಅಂಕಣ ಹಂಚಿನ 2 ಅಂಕಣ ಬಂಜರ್ ಜಮ್ಮಾನು	ಚರಾಂಡೀನಲ್ಲಿ ಹಾಕುವ ಬಗ್ಗೆ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಮೋತೀಖಾನೆ ಬೀದಿ, ಪಶ್ಚಿಮಕ್ಕೆ ವೆಂಕಟಕೃಷ್ಣೀಅರಸನ ಮನೆ, ಉತ್ತರಕ್ಕೆ ಗರಳಪುರಿಶಾಸ್ತ್ರಿಗಳ ಮನೆ
10	ಡಿಟೋ	ಕಪನೀಪತಿ ಶಾಸ್ತ್ರಿ	26	66	ಹಂಚಿನ 16 ಅಂಕಣ ಡಿಟೋ ವಪ್ಪಾರ 2 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ವೆಂಕಟಸುಬಯ್ಯನ ಮನೆ, ದಕ್ಷಿಣಕ್ಕೆ ಸುಬಣ್ಣನ ಮನೆ, ಪಶ್ಚಿಮಕ್ಕೆ ರಘುಪತಿ ಶಾಸ್ತ್ರಿಗಳ ಮನೆ, ಉತ್ತರಕ್ಕೆ ಮೋತೀಖಾನೆ ಬೀದಿ
11	ಡಿಟೋ	ಚಿಕ್ಕಲಿಂಗರಾಜೇ ಅರಸಿನವರು	22 20	33 20	ಹಂಚಿನ 9 ಅಂಕಣ ಜಮ್ಮಾನು	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಮೋತೀಖಾನೆ ಬೀದಿ ಪಶ್ಚಿಮಕ್ಕೆ ಶಾಮರಾಯರ ಮನೆ, ಉತ್ತರಕ್ಕೆ ಮಾದಪ್ಪಶಾಸ್ತ್ರಿ ಮನೆ
12	ಡಿಟೋ	ಮಾದಪ್ಪ ಶಾಸ್ತ್ರಿ	18	22	ತಖ್ತಪೋಷ್ 5 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಲಿಂಗರಾಜೇ ಅರಸಿನವರ ಲಾಯ, ಪಶ್ಚಿಮಕ್ಕೆ ಶಾಮರಾಯ ಬಂಜರ್ ಜಮ್ಮಾನು, ಉತ್ತರಕ್ಕೆ ಸರಕಾರ್ ಜಮ್ಮಾನು
13	ವೀಣೇ ವೆಂಕಟಸುಬ್ಬಯ್ಯನವರ ಬೀದಿ	ಸುಬ್ಬಣ್ಣ	30	34	ತಾರೀ 7 ಅಂಕಣ ತಖ್ತಪೋಷ್ 12 ಅಂಕಣ ಹಂಚಿನದು 15 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಸರಕಾರದ ಜಮ್ಮಾನು, ಪಶ್ಚಿಮಕ್ಕೆ ವೆಂಕಟರಮಣಯ್ಯನ ಮನೆ, ಉತ್ತರಕ್ಕೆ ವೀಣೇ ವೆಂಕಟಸುಬಯ್ಯನವರ ಗಲ್ಲಿ
14	ಡಿಟೋ	ಅಗರದ ಕೃಷ್ಣಪ್ಪನ ಹೆಂಡತಿ ಶಂಕರಮ್ಮ	43	20	ಜಮ್ಮಾನು 1 ಭಾವಿ	ಡಿಟೋ	ಪೂರ್ವಕ್ಕೆ ಸುಬ್ಬಯ್ಯನ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನ ಬೀದಿ, ಪಶ್ಚಿಮಕ್ಕೆ ರಾಮಶಾಸ್ತ್ರಿ ಮನೆ, ಉತ್ತರಕ್ಕೆ ವೆಂಕಟಶಾಸ್ತ್ರಿ ಮನೆ
15	ಮುನಿಯಾಜಟ್ಟಿಕೇರಿ	ವೆಂಕಟಶಾಸ್ತ್ರಿ	45	27	ತಖ್ತಪೋಷ್ 4 ಅಂಕಣ ಹಂಚಿನದು 8 ಅಂಕಣ ವಪ್ಪಾರ 3 ಅಂಕಣ	ಡಿಟೋ	ಪೂರ್ವಕ್ಕೆ ಚಿನ್ನಪ್ಪ ಜೋಯಿಸರಮನೆ, ದಕ್ಷಿಣಕ್ಕೆ ಶಂಕರಮ್ಮನ ಮನೆ, ಪಶ್ಚಿಮಕ್ಕೆ ಸುಬ್ಬರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟಿ ಬೀದಿ.

ಬಿ.ಎಂ.ಜೀಬ್ ಹುಕ್ಕುಂ,
ಆರ್. ವಿಜಯಿಾಂದ್ರರಾವ್,
ಚೀಫ್ ಸೆಕ್ರಿಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್ ರೆವಿನ್ಯೂ ಇಲಾಖೆ.

ಆರ್ಡರ್ ನಂಬರ್ 3786—95—101 ಮತ್ತುಂ 1ನೇ ಸೆಪ್ಟಂಬರ್ 1887ನೇ ಇಸವಿ ಮೊಕ್ಕಾಂ ಬೆಂಗಳೂರು.

1887ನೇ ಇಸವಿ ಫಿಬ್ರವರೀ 11ನೇ ಮತ್ತುಂ 341ನೇ ನಂಬರು ಇನ್ಸ್ಟ್ರಾಕ್ಷನ್ನಿನಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೆ ಗ್ಯಾರಂಟಿಯಾನೆ ಸರ್ವೆ ಕಾಲಿನ XVIIನೇ ನಿಬಂಧನೆ ಅನುಸರಿಸಿ ಇನ್ನೊಂ ಗ್ರಾಮಗಳಲ್ಲಿರತಕ್ಕ ತರೀ ಜಮ್ಮಾಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇರಿಗೇಷನ್‌ಸೆಸ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡುತ್ತಿದೆ. ಇನಾಂದಾರರು ಸಾಧಾರಣವಾಗಿ ಈ